# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೨ | ನೋಂದಣಿ ಸಂಖ್ಯೆ : KARBIL / 2005 / 16123 | ಆಗಸ್ಟ್ - 2013 | ಸಂಚಿಕೆ ೮


**ಶ್ರೀ ಸುಬ್ರಹ್ಮಣ್ಯ ಸಭಾದ ಮುಂದಿನ ಕಾರ್ಯಕ್ರಮಗಳು**
**ತಾ. 20–08–2013 ಋಗುಪಾಕರ್ಮ, ತಾ. 25–08–2013 ಶೃಂಗೇರಿ ಯಾತ್ರೆ, ತಾ. 01–09–2013 ಶ್ರೀಕೃಷ್ಣ ಜನ್ಮಾಷ್ಟಮಿ**

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ ಕೂಟ'

ದೈನಂದಿನ ಯಾಂತ್ರಿಕ ಜೀವನದಿಂದ ಬೇಸತ್ತ ಮನಸ್ಸಿಗೆ ಮುದನೀಡುವಂತಹ, ಸಮಾಜ ಬಾಂಧವರೆಲ್ಲರನ್ನೂ ಒಗ್ಗೂಡಿಸುವ ಪ್ರಸ್ತುತ ವರ್ಷದ ಆಟಗಳು, ಕೂಟಗಳು ಹಬ್ಬಗಳು ಇಂದು ಶ್ರೀಸಭಾದಲ್ಲಿ ಆರಂಭಗೊಂಡಿತ್ತು. ಪರೀಕ್ಷೆಯ ಒತ್ತಡ, ಬೇಸಿಗೆಯ ಬೇಗೆ ಇವೆಲ್ಲವುಗಳ ನೆಪ ಒಡ್ಡಿ ಸ್ವಲ್ಪ ಕಾಲ ವಿರಮಿಸಿದ ಸಭೆಯಲ್ಲಿ **'ಆಟಿತೊ ಆಟ ಕೂಟ'**ವನ್ನು ತಾರೀಕು 04-08-2013ರಂದು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ವಾಡಿಕೆಯಂತೆ ಒಳಾಂಗಣ ಕ್ರೀಡೆಗಳಾದ ಕೇರಂ ಮತ್ತು ವಿಶೇಷವಾಗಿ ಆಟಿಯಲ್ಲಿ ಆಡುವಂತಹ ಚೆನ್ನೆಮಣೆ, ಕಲ್ಲಾಟದ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸಮಾಜ ಬಾಂಧವರ ಸಹಕಾರದಿಂದ ಕೇರಂ ಬೋರ್ಡ್, ಚೆನ್ನೆಮಣೆ ಹಾಗೂ ಇನ್ನಿತರ ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಮುಂಜಾನೆಯೇ ಒಳ ಆವರಣದಲ್ಲಿ ಜೋಡಿಸಲಾಗಿತ್ತು.



ಮೊಟ್ಟಮೊದಲು ಹಿರಿಯರಾದ ಶ್ರೀಯುತ ರಘುರಾಮ ಶರ್ಮ ಮತ್ತು ಚೆಂಡುಕಳ ಶ್ರೀ ಶ್ರೀಪತಿ ರಾವ್‌ರವರು ಕೇರಂ ಆಟದ ಉದ್ಘಾಟನೆಗೆ ಚಾಲನೆ ನೀಡಿದರು. ಬೆಳ್ಮಣ್ ಶ್ರೀ ಜಯಚಂದ್ರ ಮತ್ತು ಶ್ರೀ ರಾಘವೇಂದ್ರ ರಾವ್ ಇವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಹಿರಿಯರ ಹಾಗೂ ಕಿರಿಯರ ವಿಭಾಗವಿದ್ದ ಈ ಆಟ ಅತ್ಯಂತ ಸ್ಪರ್ಧಾತ್ಮಕವಾಗಿ ಮೂಡಿಬಂತು. ನುರಿತ ಮಹಿಳೆಯರು ಕಲ್ಲಾಟದಲ್ಲಿ ತೊಡಗಿದರೆ ಆಬಾಲವೃದ್ಧರು ಚೆನ್ನೆಮಣೆಯ ಆಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು.

ಮಧ್ಯಾಹ್ನಕ್ಕೆ ಬಾಯಿಚಪ್ಪರಿಸುವ, ವಿಶೇಷವಾಗಿ ಆಟಿಯಲ್ಲಿ ತಯಾರಿಸುವ ವ್ಯಂಜನಗಳಾದ ಪತ್ರೊಡೆ, ಹುರುಳಿ ಸಾರು, ಕಣಿಲೆ ಚಟ್ನಿ, ಅಕ್ಕಿ ಹಾಲುಬ್ಯಾ, ಹಲಸಿನ ಬೀಜ ಹೆಸರು ಬೇಳೆ ಸಾಂಬಾರು, ಪೇರಡ್ಯೆ ಪಾಯಸ, ಸಜಂಕ್‌ವಡೆ ಒಳಗೊಂಡ ಸುಗ್ರಾಸ ಭೋಜನವನ್ನು ಏರ್ಪಡಿಸಲಾಗಿತ್ತು.

ಎರಡನೆಯ ಪುಟಕ್ಕೆ...

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**



ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ ತಾ. 01–09–2013ನೇ ಆದಿತ್ಯವಾರದಂದು **ಶ್ರೀಕೃಷ್ಣ ಜನ್ಮಾಷ್ಟಮಿ**ಯನ್ನು **ವಿವಿಧ ಕಾರ್ಯಕ್ರಮ**ಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಕಾರ್ಯಕ್ರಮಗಳು

ಬೆಳಗ್ಗೆ 9–00ರಿಂದ : **ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ**

10–00ರಿಂದ : **ಭಗವದ್ಗೀತೆ ಪಠಣ ಸ್ಪರ್ಧೆ**
10 ವರ್ಷದ ಕೆಳಗಿನ ಮಕ್ಕಳಿಗೆ ಧ್ಯಾನ ಶ್ಲೋಕ
**ಕಂಠ ಪಾಠ ಸ್ಪರ್ಧೆ**
10-16 ಹಾಗೂ 16 ವರ್ಷದ ಮೇಲ್ಪಟ್ಟವರಿಗೆ 12ನೇ ಅಧ್ಯಾಯ

11–00ರಿಂದ : **ಮುದ್ದು ಕೃಷ್ಣ ವೇಷ ಸ್ಪರ್ಧೆ**
1ರಿಂದ 4 ವರ್ಷದೊಳಗಿನ ವಿಭಾಗ
4ರಿಂದ 8 ವರ್ಷದೊಳಗಿನ ವಿಭಾಗ
8ರಿಂದ 12 ವರ್ಷದೊಳಗಿನ ವಿಭಾಗ



12–00ರಿಂದ : **ಭಕ್ತಿಗೀತೆ ಸ್ಪರ್ಧೆ**
16ರಿಂದ 35 ವರ್ಷದ ಒಳಗಿನ ವಿಭಾಗ
35 ವರ್ಷದ ಮೇಲ್ಪಟ್ಟವರ ವಿಭಾಗ



**ಮಡಕೆ ಒಡೆಯುವ ಸ್ಪರ್ಧೆ**
**ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ** (ಮುಕ್ತ ವಿಭಾಗ)

ಮಧ್ಯಾಹ್ನ 1–00ರಿಂದ : **ಭೋಜನ**

2–00ರಿಂದ : **ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ**

2–30ರಿಂದ : **ಸಾಂಸ್ಕೃತಿಕ ಕಾರ್ಯಕ್ರಮಗಳು**



**ವಿಶೇಷ ಸೂಚನೆ :**

*ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ :*

**ಶ್ರೀ ವಿದ್ಯಾರಣ್ಯ ಕೆ.** : ಮೊ. : 9686201277
**ಶ್ರೀಮತಿ ಶೈಲಜ ಶ್ರೀಕಾಂತ್** : ಮೊ. : 9341446255, 2495929 (R)
**ಶ್ರೀಮತಿ ಅರುಣಾ ಸೋಮಶೇಖರ್** : ಮೊ. : 9880413243, 2452860 (R)

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**

ತಾರೀಕು 20–08–2013ರಂದು ಬೆಳಗ್ಗೆ 6–00 ಗಂಟೆಗೆ ಶ್ರೀ ಸಭಾದಲ್ಲಿ **ಋಗುಪಾಕರ್ಮ** ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

### ಶೃಂಗೇರಿ ಯಾತ್ರೆ

ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ **ಶೃಂಗೇರಿ ಯಾತ್ರೆ** ಆಯೋಜಿಸಲಾಗಿದೆ. ತಾರೀಕು 25–08–2013ರ ಆದಿತ್ಯವಾರದಂದು ಬೆಳಗ್ಗೆ 6–00 ಗಂಟೆಗೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

**ಪ್ರವಾಸದ ಶುಲ್ಕ ಒಬ್ಬರಿಗೆ – ರೂ. 250/-**
**5ರಿಂದ 12 ವರ್ಷದೊಳಗಿನ ಮಕ್ಕಳಿಗೆ – ರೂ. 150/-**

***ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ***

**ಅನಿಲ್ ರಾವ್ ಬಿ. ಎಸ್.**
ಮೊಬೈಲ್ : 9880037110

**ಪಿ. ಶ್ರೀಕಾಂತ್ ರಾವ್**
ಮೊಬೈಲ್ : 9343361618

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್**
**ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ಹಾರ್ದಿಕ ಸ್ವಾಗತ

'ಸ್ವಾತಿ' ಮುತ್ತಿನ ಮಗು
ನಿನ್ನಿಂದ ನನ್ನ ಮುಖದಲ್ಲಿ
ಅರಳಿತು 'ಪ್ರಮೋದ'ದ ನಗು

ನಿನ್ನ ಅಸ್ತಿತ್ವದ ಅರಿವು
ಕಣ್ಣಿಂದ ಹರಿಯಿತು ಪನ್ನೀರು
ಕೋಟಿ ಕನಸುಗಳನ್ನು ಹೊತ್ತು ನೀ ಬಂದೆ
ನನ್ನ ಒಡಲೊಳಗೆ 'ಹರ್ಷ'ವ ನೀ ತಂದೆ

ಸುರಿಯಲಿ 'ಪ್ರೀತಿ'ಯ 'ಕನಕ'ಧಾರೆ
ಅದೇ ನಮ್ಮೆಲ್ಲರ ಆಸರೆ
ನಿನ್ನ ಪುಟ್ಟ ಕಾಲುಗಳಿಂದ ಒದ್ದು
ಅದೇ ನನ್ನ ನೋವುಗಳಿಗೆ ಮದ್ದು

'ಚೈತ್ರ' ಮಾಸದಿ ನಿನ್ನ ಜನನ
'ಆದಿತ್ಯ'ನಿಗೆ ಮಾಡುವೆ 'ಅನನ್ಯ' ನಮನ
ಬೆಳಗಲಿ 'ವಿದ್ಯೆ'ಯ ನಂದಾದೀಪ
'ಅಕ್ಷಯ'ವಾಗಲಿ 'ರಾಜ' ಲಕ್ಷ್ಮಿಯ 'ಪ್ರಸಾದ'

ನಿನ್ನ ಮುಂದಿನ 'ಪ್ರತಿಭೆ'
ಈ ಲೋಕಕೆ ತರಲಿ 'ಪ್ರಭಾಕರ'ನ ಪ್ರಭೆ.

–***ಸ್ವಾತಿ ಪ್ರಮೋದ್ ಕೇದಗೆ,*** ಮಂಗಳೂರು

## ಮನೆಯೇ ಮಂತ್ರಾಲಯ...



ಶ್ರೀ ದಿನೇಶ ಮತ್ತು ಶ್ರೀಮತಿ ಗೌರಿಯವರು ಪೊಳಲಿಯ ಬೆಳ್ಳಿಬೆಟ್ಟುವಿನಲ್ಲಿ ಕಟ್ಟಿಸಿರುವ **'ಶಿವಶಕ್ತಿ ಕೃಪಾ'**ದ ಗೃಹಪ್ರವೇಶವು ತಾ. 10-07-2013ನೇ ಬುಧವಾರದಂದು ನೆರವೇರಿತು.



## ಹೊಸಬಾಳಿನ... ಹೊಸಿಲಲಿ ನಿಂತಿರುವ



ಶ್ರೀಮತಿ ಸುಮತಿ ಮತ್ತು ಶ್ರೀ ಜನಾರ್ದನ ರಾಯರ ಸುಪುತ್ರ **ಚಿ। ಗಣೇಶ ಪ್ರಸಾದ** ಹಾಗೂ ಶ್ರೀಮತಿ ಸರೋಜ ಮತ್ತು ಶ್ರೀ ಶಿವರಾಮ ಶರ್ಮರ ಸುಪುತ್ರಿ **ಚಿ। ಸೌ। ಸೌಮ್ಯ** ಇವರ ವಿವಾಹವು ದಿನಾಂಕ 14-07-2013ರಂದು ಉಪ್ಪಿನಂಗಡಿಯ ಶ್ರೀ ಗುರು ಸುಧೀಂದ್ರ ಕಲಾಮಂದಿರದಲ್ಲಿ ನಡೆಯಿತು.

* * * *

ದಿ. ಶಂಕರರಾಯರ ಸುಪುತ್ರ **ಚಿ। ರಾಕೇಶ್** ಹಾಗೂ ಬೀರೂರು ಹನುಮಂತರಾಯರ ಸುಪುತ್ರಿ **ಚಿ। ಸೌ। ರಂಜಿತ** ಇವರ ವಿವಾಹವು ದಿನಾಂಕ 15-07-2013ರಂದು ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನದ ಶ್ರೀ ಸುಬ್ರಹ್ಮಣ್ಯ ಮಂದಿರದಲ್ಲಿ ನಡೆಯಿತು.

## ಶ್ರೀ ಸುಬ್ರಹ್ಮಣ್ಯ ಸಭಾದ ಯುವ ವೇದಿಕೆ ಮತ್ತು ಮಹಿಳಾ ವೇದಿಕೆಗಳ ಪದಾಧಿಕಾರಿಗಳ ಆಯ್ಕೆ

ಶ್ರೀ ಸಭಾದಲ್ಲಿ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಗಳ ಸಭೆ ನಡೆದು ಯುವ ವೇದಿಕೆಯ ನೂತನ ಅಧ್ಯಕ್ಷರಾಗಿ ಶ್ರೀ ವಿದ್ಯಾರಣ್ಯ ಕೊಲ್ಲಿಪಾಲ್, ಉಪಾಧ್ಯಕ್ಷರಾಗಿ ಶ್ರೀ ನಾಗರಾಜ್ ವರ್ಕಾಡಿ, ಕಾರ್ಯದರ್ಶಿಯಾಗಿ ಶ್ರೀ ಸುರೇಶ್ ಕೆ. ಆಯ್ಕೆಯಾದರು. ಮಹಿಳಾ ವೇದಿಕೆಯ ಅಧ್ಯಕ್ಷೆಯಾಗಿ ಶ್ರೀಮತಿ ಶೈಲಜಾ ಶ್ರೀಕಾಂತ್, ಉಪಾಧ್ಯಕ್ಷೆಯಾಗಿ ಶ್ರೀಮತಿ ಅರುಣಾ ಸೋಮಶೇಖರ್, ಕಾರ್ಯದರ್ಶಿಯಾಗಿ ಶ್ರೀಮತಿ ಕುಸುಮಾ ನವೀನ್ ಕುಮಾರ್ ಆಯ್ಕೆಯಾದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಪ್ರಸ್ತಾವನೆಗೈದರು. ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ.ಎಸ್. ಆಯ್ಕೆಗಳನ್ನು ಘೋಷಿಸಿದರು. ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪಿ. ಶ್ರೀಕಾಂತ್ ರಾವ್ ಕಳೆದ 3 ವರ್ಷಗಳ ಅವಧಿಯ ಕಾರ್ಯಕ್ರಮಗಳ ಸಹಕಾರಕ್ಕಾಗಿ ಸರ್ವರಿಗೂ ವಂದಿಸಿ, **'ಆಟಿತೊ ಆಟ ಕೂಟ'**ದಂತಹ ವಿಶಿಷ್ಟ ಕಾರ್ಯಕ್ರಮಗಳು ಇನ್ನಷ್ಟು ಜೋಡಣೆಗೊಳ್ಳಲಿ ಎಂದು ನೂತನ ಸಮಿತಿಗೆ ಅಭಿನಂದನೆ ಸಲ್ಲಿಸಿದರು. ನೂತನ ಅಧ್ಯಕ್ಷ ಹಾಗೂ ಅಧ್ಯಕ್ಷೆಯರು ಮುಂದಿನ ಕಾರ್ಯಕ್ರಮಗಳಿಗೆ ಸರ್ವರ ಸಹಕಾರ ಬಯಸುತ್ತಾ ಆಯ್ಕೆಗಾಗಿ ಧನ್ಯವಾದ ನೀಡಿದರು.

ವರದಿ : ***ಪಿ. ಶ್ರೀಕಾಂತ್ ರಾವ್,*** ಮಂಗಳೂರು

*ಒಂದನೇ ಪುಟದಿಂದ....*

## 'ಆಟಿತೊ ಆಟ ಕೂಟ'

ಮಧ್ಯಾಹ್ನದ ನಂತರ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ಕರೋಕೆ ರಸಮಂಜರಿ' ಯನ್ನು ಆಯೋಜಿಸಲಾಗಿತ್ತು.

ಹಲವಾರು ಉದಯೋನ್ಮುಖ ಪ್ರತಿಭೆಗಳು ತಮ್ಮ ಸಿರಿಕಂಠದಿಂದ ಯಾವ ಹಿನ್ನೆಲೆಗಾಯಕರಿಗೂ ಕಡಿಮೆ ಇಲ್ಲದಂತೆ ಸುಮಧುರ ಗೀತೆಗಳನ್ನು ಸುಶ್ರಾವ್ಯದಿಂದ ಹಾಡಿ ಮೆಚ್ಚುಗೆ ಗಳಿಸಿದ್ದಾರೆ. ಕಾರ್ಯಕ್ರಮಗಳನ್ನು ಶ್ರೀ ನಾಗರಾಜ್ ವರ್ಕಾಡಿ ಮತ್ತು ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿದರೆ ಶ್ರೀ ಕೆ. ಸುರೇಶ್, ಶ್ರೀಮತಿ ಶೈಲಜಾ, ಶ್ರೀಮತಿ ಅರುಣಾ, ಶ್ರೀಮತಿ ಕುಸುಮಾ ಸಹಕರಿಸಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆಯ ನಂತರ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ವರದಿ : ***ಶ್ರೀಮತಿ ಅರುಣಾ ಸೋಮಶೇಖರ್,*** ಮಂಗಳೂರು

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ

ಪೊಳಲಿಯ ಶ್ರೀ ಪಿ. ಎಸ್. ಸುಬ್ರಹ್ಮಣ್ಯ ರಾವ್‌ರವರ ಧರ್ಮಪತ್ನಿ ಶ್ರೀಮತಿ ಶಕುಂತಲಾರವರು ತಾ. 20-07-2013ರಂದು ನಿಧನ ಹೊಂದಿದರು. ಅವರು ಪತಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

* * * *

ಮಹಾರಾಷ್ಟ್ರದ ಮಾಜಿ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವೆ ಡಾ. ಲಲಿತಾ ರಾವ್ (93) ಜು. 28ರಂದು ನಿಧನ ಹೊಂದಿದರು. ಮಂಗಳೂರಿನ ದಿ. ಡಾ। ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿ ಅವರ ಪುತ್ರಿಯಾಗಿದ್ದ ಮೃತರು, ಉದ್ಯಮಿ ಪಿ. ವೆಂಕಟರಾವ್ ಅವರನ್ನು ವಿವಾಹವಾಗಿದ್ದರು. ಅವರು ಖ್ಯಾತ ಕ್ರಿಕೆಟಿಗ ರವಿಶಾಸ್ತ್ರಿ ಅವರ ಸೋದರತ್ತೆ. ಮೃತರು ಅಮೇರಿಕದಲ್ಲಿ ನೆಲೆಸಿರುವ ಪುತ್ರನನ್ನು ಅಗಲಿದ್ದಾರೆ. ಡಾ। ಲಲಿತಾ ರಾವ್ ಉತ್ತಮ ಸಂಘಟಕಿ, ಕಲಾಪ್ರಿಯೆ ಮತ್ತು ಒಳ್ಳೆಯ ಗಾಯಕಿಯಾಗಿದ್ದರು.


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Oznam Complex**
**Church Building, Main Road**
**BAJPE, MANGALORE**





ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**




## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ಯಶಸ್ವಿ 2ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸ ಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | |
|---|---|---|
| ಮಹಾ ಪೋಷಕರು | – | ರೂ. 10,000/– |
| ಪೋಷಕರು | – | ರೂ. 5,000/– |
| ಆಜೀವ ಚಂದಾ ದರ | – | ರೂ. 500/– |


**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**





**PRAMOD**
**AUTOMOBILES**
**KARANGALPADY**
**MANGALORE- 575 003**

30 Years of Service


Ph. : 2493633 (O)
2212723 (R)
M. : 9448260225

**Wholesale & Retail Dealers in**
**2 & 3 WHEELERS SPARES & ACCESSORIES**

**Prop. : Ln. K. HARSHA KUMAR**

ಇತ್ತೀಚೆಗೆ ನಿಧನ ಹೊಂದಿದ ಶ್ರೀ ಸುಬ್ರಹ್ಮಣ್ಯ ಸಭಾದ ಹಿರಿಯ ಮಾರ್ಗದರ್ಶಿಗೆ ನುಡಿ ನಮನ

# ಯಶಸ್ವೀ ಉದ್ಯಮಿ ಶ್ರೀ ಬಿ. ಎಂ. ಸಂಜೀವ ರಾವ್



ಅಟೋಮೊಬೈಲ್ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡ ಯಶಸ್ವೀ ಉದ್ಯಮಿ ಶ್ರೀ ಬಿ. ಎಂ. ಸಂಜೀವ ರಾಯರ ಸಾಧನೆಗಳು ಎಂಥವರಿಗೂ ಸ್ಫೂರ್ತಿ ನೀಡುವಂತಹುದು.

ಮರಿಯಪ್ಪಯ್ಯ – ಭಾಗೀರಥಿ ದಂಪತಿಗಳ ಸುಪುತ್ರರಾಗಿ ತಾ. 6-1-1924ರಲ್ಲಿ ಬಂಟ್ವಾಳ ತಾಲೂಕಿನ ಕೇದಗೆಯಲ್ಲಿ ಜನಿಸಿದ ಸಂಜೀವ ರಾಯರು ಎರಡನೆಯ ಜಾಗತಿಕ ಯುದ್ಧದ ಸಂದರ್ಭದಲ್ಲಿ ಭಾರತೀಯ ಭೂಸೇನೆಯನ್ನು ಸೇರಿ ಐದು ವರ್ಷಗಳ ಕಾಲ ಮಿಲಿಟರಿ ಅನುಭವವನ್ನು ಪಡೆದುಕೊಂಡರು.

1953ರಲ್ಲಿ ಡೀಸೆಲ್ ವಾಹನಗಳ ಸೇವಾ ಕೇಂದ್ರವಾದ 'ಸ್ಟ್ಯಾಂಡರ್ಡ್ ಅಟೋಮೊಬೈಲ್ಸ್‌ನ್ನು ಮಂಗಳೂರಿನಲ್ಲಿ ಸ್ಥಾಪಿಸಿದರು. 1956ರಲ್ಲಿ ಲಾಂಬ್ರೆಟ್ಟಾ ಸ್ಕೂಟರ್‌ಗಳ ಫ್ರಾಂಚೈಸಿ ಪಡೆದ ಸಂಜೀವ ರಾಯರಿಗೆ ದ. ಕ. ಜಿಲ್ಲೆಗೆ ಲಾಂಬ್ರೆಟ್ಟಾ ಸ್ಕೂಟರನ್ನು ಮೊದಲು ಪರಿಚಯಿಸಿದವರು ಎಂಬ ಹಿರಿಮೆ ಸಲ್ಲುತ್ತದೆ.

ಮುಂದೆ ತಮ್ಮ ಉದ್ಯಮವವನ್ನು ವಿಸ್ತರಿಸುತ್ತಾ ಬಂದ ಅವರು ಸ್ಟ್ಯಾಂಡರ್ಡ್ ಅಟೋ ಇಂಡಸ್ಟ್ರೀಸ್, ಪ್ರಭಾತ್ ಅಟೋಮೊಬೈಲ್ಸ್, ವಿಶ್ರಾಮ್ ಮೋಟಾರ್ಸ್ ಮುಂತಾದ ಸಂಸ್ಥೆಗಳನ್ನು ಹುಟ್ಟುಹಾಕಿ ಯಮಾಹಾ, ರಾಜ್‌ದೂತ್, ಎಲ್‌ಎಂಎಲ್ ವೆಸ್ಪಾ ಮುಂತಾದ ದ್ವಿಚಕ್ರ, ತ್ರಿಚಕ್ರ ವಾಹನಗಳ ಮತ್ತು ಅದರ ಬಿಡಿಭಾಗಗಳ ಮಾರಾಟದ ದೊಡ್ಡ ಜಾಲವನ್ನೇ ನಿರ್ಮಿಸಿದರು. 1998ರಲ್ಲಿ ಹುಂಡೈ ಸಂಸ್ಥೆಯ ಕಾರುಗಳ ಮಾರಾಟ ಮತ್ತು ಸರ್ವಿಸಿಂಗ್ ಘಟಕವನ್ನೂ ಸ್ಥಾಪಿಸಿದರು.

ಸಂಜೀವ ರಾಯರ ಔದ್ಯಮಿಕ, ಸಾಮಾಜಿಕ ಕ್ಷೇತ್ರದ ಚಟುವಟಿಕೆಗಳೂ ವಿಸ್ತಾರವಾದುದು. ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್ (Mangalore Productivity Council)ನ ಸ್ಥಾಪಕ ಸದಸ್ಯ, ಮಂಗಳೂರು ರೋಟರಿ ಕ್ಲಬ್ಬಿನ ಮಾಜಿ ಅಧ್ಯಕ್ಷ, ಮಂಗಳೂರು ಮೇನೇಜ್‌ಮೆಂಟ್ ಎಸೋಸಿಯೇಷನ್ (Mangalore Management Association)ನ ಕಾರ್ಯಕಾರಿ ಸಮಿತಿ ಸದಸ್ಯ, ಇಂಜಿನಿಯರ್ಸ್ ಎಸೋಸಿಯೇಶನ್ (Engineers Association)ನ ಸದಸ್ಯ, ಕೆನರಾ ಚೇಂಬರ್ ಆಫ್ ಕಾಮರ್ಸ್ (Canara Chamber of Commerce)ನ ಸದಸ್ಯ, ಫೆಡರೇಶನ್ ಆಫ್ ಅಟೋಮೊಬೈಲ್ ಡೀಲರ್ಸ್ ಎಸೋಸಿಯೇಷನ್ ಆಫ್ ಇಂಡಿಯಾ (Federation of Automobile Dealers Association of India)ದ ಸದಸ್ಯ... ಹೀಗೆ ಪಟ್ಟಿ ಮುಂದುವರಿಯುತ್ತದೆ.

ಸಹಜವಾಗಿಯೇ ಹಲವು ಪ್ರಶಸ್ತಿಗಳೂ ಸನ್ಮಾನಗಳೂ ಸಂಜೀವರಾಯರಿಗೆ ಸಂದಿವೆ. ದ. ಕ. ಜಿಲ್ಲಾ ಅಟೋಮೊಬೈಲ್ ಎಂಡ್ ಟಯರ್ ಡೀಲರ್ಸ್ ಎಸೋಸಿಯೇಶನ್, ದ.ಕ., ಉಡುಪಿ, ಕೊಡಗು ಜಿಲ್ಲಾ ಇಂಜಿನಿಯರ್ಸ್ ಎಸೋಸಿಯೇಶನ್, ದ. ಕ. ಜಿಲ್ಲಾ ದ್ರಾವಿಡ ಬ್ರಾಹ್ಮಣರ ಸಂಘ, ಮಂಗಳೂರು ಬಂಟರ ಸಂಘ, ದ. ಕ. ಜಿಲ್ಲಾ ನಿವೃತ್ತ ಸೈನಿಕರ ಸಂಘ, ಪಾವಂಜೆಯ ಸ್ಥಾನಿಕ ಬ್ರಾಹ್ಮಣ ಸಭಾ... ಹೀಗೆ ಹಲವು ಸಂಘ-ಸಂಸ್ಥೆಗಳು ಸಂಜೀವ ರಾಯರ ಸಾಧನೆಗಳನ್ನು ಗುರುತಿಸಿ ಗೌರವಿಸಿ, ಸನ್ಮಾನಿಸಿವೆ.

ಮೃತರು ಇಬ್ಬರು ಪುತ್ರರನ್ನೂ, ಇಬ್ಬರು ಪುತ್ರಿಯರನ್ನೂ, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

*(ಕೃಪೆ : "ನೂರು ಹೆಜ್ಜೆ" ಸ್ಮರಣ ಸಂಚಿಕೆ)*

## Shri Subramanya Sabha (R.)

**Kudpi Padmanabhayya Gardens, Bejai Road, Mangalore - 575 003**

### AN APPEAL

You are aware that the Sabha was founded 106 years ago with an objective of upliftment of our community through Promotion of education amongst our youth. To fulfil this objective the Sabha has been running a Hostel for students coming from economically weaker families. The Sabha has also been distributing the scholarship to the students of our community.

During the Centenary Year the entire hostel block was expanded and rebuilt with facilities required during the present days. The distribution of scholarship was also streamlined. Stress was given for increased loan scholarship. The scholarship distributed by the Sabha during the last 3 years is as follows :

| Year | 2010-11 | 2011-12 | 2012 -13 |
|---|---|---|---|
| No. of students assisted | 151 | 151 | 233 |
| Loan scholarship | Rs. 14.15 Lakhs | Rs.14.70 Lakhs | Rs. 25.05 Lakhs |
| General Scholarship | Rs.1.62 Lakhs | Rs.1.93 Lakhs | Rs. 3.44 Lakhs |
| Donor to beneficiary - Scheme | Rs. 0.40 Lakhs | Rs. 0.50 Lakhs | Rs. 0.79 Lakhs |
| Interest subsidy | Rs. 3.29 Lakhs | Rs. 4.62 Lakhs | Rs. 6.00 Lakhs |
| Total | Rs.19.46 Lakhs | Rs. 21.75 Lakhs | Rs. 35.28 Lakhs |

It is proposed to strengthen the Corpus fund for loan scholarship by taking it from the present Rs. 77.50 Lakhs to Rs. 300 Lakhs. So that we would be able to increase the per student per year assistance from the present Rs. 0.30 Lakhs to Rs. 1-00 Lakhs. This is required in view of the increased cost of education. We request you for generous donation towards the Corpus fund for Loan scholarship. The donation above Rs. 1 Lakhs will be kept as separate fund in the name proposed by the donor. Please send your donation by Cheque / DD drawn in the name Sri Subramanya Sabha, Mangalore. If you want to avail the tax benefits under section 80 G of the I.T. Act, we request you to make the Cheque / DD in the name of Sri Subramanya Sabha Charitable Trust, Mangalore.

**C. S. RAO** – President
**M.R. VASUDEVA / Dr A. P. KRISHNA** – Vice - Presidents
**KARUN RAO BELLE** – Secretary
**B.S. ANIL RAO / CHETHAN SHARMA** – Joint Secretaries
**SHRIKANTH RAO P.** – Treasurer



**SHARMA ENTERPRISES**
KANKANADY, MANGALORE - 575 002
Prop. : *Chethan Sharma*
Mob. : 9844187083

**PREETHIKA AUTOMOBILES**
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)




## 'ನಮ್ಮ ಸಾಧಕರು'



### ಡಾ. ಯಂ. ಸತ್ಯನಾಥ್

ತಾರೀಕು 19ನೇ ಅಕ್ಟೋಬರ್ 1954ರಂದು ಅಜ್ಜಾವರ ಈಶ್ವರ ಶ್ಯಾನುಭೋಗ್ ಮತ್ತು ಗೌರಮ್ಮ ದಂಪತಿಯವರ ಮಗನಾಗಿ ಜನಿಸಿದ ಡಾ. ಸತ್ಯನಾಥರವರು ಶಾಲಾ, ಕಾಲೇಜುಗಳಲ್ಲಿ ಉನ್ನತ ಅಂಕಗಳನ್ನು ಗಳಿಸಿ, ಕಲ್ಲಿಕೋಟೆಯ ಸರಕಾರಿ ಮೆಡಿಕಲ್ ಕಾಲೇಜಿನಲ್ಲಿ ಸ್ಟೇಟ್ ಮೆರಿಟ್‌ನಲ್ಲಿ ಆಯ್ಕೆಗೊಂಡು, ವೈದ್ಯಕೀಯ ಶಿಕ್ಷಣ ಪಡೆದು, 1977ರಿಂದ ಕಲನಾಡು ನರ್ಸಿಂಗ್ ಹೋಂನ್ನು ನಡೆಸಿಕೊಂಡು ಬರುತ್ತಿದ್ದಾರೆ. 2001ರಲ್ಲಿ ಆಲ್ಟರ್‌ನೇಟಿವ್ ಮೆಡಿಸಿನ್‌ನಲ್ಲಿ ಎಮ್.ಡಿ. ಮತ್ತು 2004ರಲ್ಲಿ ಎಫ್‌ಸಿಜಿಪಿ ಪಡೆದು ನುರಿತ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಇವರು ಸಮಾಜ ಸೇವೆಯಲ್ಲೂ ತುಂಬಾ ಸಕ್ರಿಯರಾಗಿದ್ದಾರೆ.

ಸುಮಾರು 6 ವರ್ಷಕಾಲ ಕಲನಾಡು ಶ್ರೀ ಮಹಾವಿಷ್ಣು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿದ್ದರು. 2005ರಿಂದ 2007ರ ತನಕ 3 ವರ್ಷ ಕಾಸರಗೋಡು ಐ.ಎಮ್.ಎ.ಯ ಅಧ್ಯಕ್ಷರಾಗಿದ್ದು, ಕಾಸರಗೋಡು ಲಯನ್ಸ್ ಕ್ಲಬ್ಬಿನ ಅಧ್ಯಕ್ಷರಾಗಿಯೂ ಸಮಾಜಸೇವೆ ಮಾಡಿದರು. ಕಳೆದ 8 ವರ್ಷದಿಂದ, ಎಲ್ಲಾ ಬುಧವಾರಗಳಲ್ಲಿ ಕಾಸರಗೋಡಿನ ಸತ್ಯಸಾಯಿ ಸೇವಾಮಂದಿರದಲ್ಲಿ ಬಡರೋಗಿಗಳಿಗಾಗಿ ಉಚಿತ ತಪಾಸಣೆ ಮತ್ತು ಚಿಕಿತ್ಸೆ ನೀಡುತ್ತಿದ್ದಾರೆ. ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಪ್ರಾಂತೀಯ ಮತ್ತು ದೇಶೀಯ ನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು. ಕಳೆದ 2 ವರುಷಗಳಿಂದ ಲಯನ್ಸ್ ಕ್ಲಬ್ಬಿನ ಸಮಾಜಸೇವಾ ಘಟಕದ ಕಾರ್ಯನಿರ್ವಾಹಕರಾಗಿದ್ದರೆ. ಪ್ರಸ್ತುತ ಕಾಸರಗೋಡು ಶಿವಬ್ರಾಹ್ಮಣ ಸಂಘದ ಅಧ್ಯಕ್ಷರಾಗಿದ್ದಾರೆ.

ದಿ. ಮುರಾರಿ ಶರ್ಮ ಮತ್ತು ಸರಸ್ವತೀ ದೇವಿಯವರ ಪುತ್ರಿ ಡಾ. ಗೀತ ಇವರ ಸಹಧರ್ಮಿಣಿ. ಡಾ. ಶ್ರುತಿ, M.D. (ಡಾ. ರಾಘವೇಂದ್ರ, M.S.- ಅವರ ಪತ್ನಿ), ಡಾ. ಶ್ರೇಯಸ್ವಿ, M.D. (ಡಾ. ಕಾರ್ತಿಕ್, M.D.- ಅವರ ಪತ್ನಿ), ಡಾ. ಸತ್ಯನಾಥರ ಇಬ್ಬರು ಪುತ್ರಿಯರು. ಅವರ ಸುಪುತ್ರ ಡಾ. ಶಾಶ್ವತ್ ಮಂಗಳೂರಿನಲ್ಲಿ M.D. ಮಾಡುತ್ತಿದ್ದಾರೆ.

ಜೀವನ ಶ್ರೇಷ್ಠ ಸಾಧನೆ ಮಾಡಿರುವ ನಮ್ಮ ಸಮಾಜದ ಹೆಮ್ಮೆಯ ಈ ಸಾಧಕನನ್ನು ಅಭಿನಂದಿಸುತ್ತದೆ. **'ಜ್ಞಾನಶಕ್ತಿ' ಬಳಗ**

## ಜ್ಞಾನ ಚರ್ಚೆ ಜುಲೈ 2013 'ರಾವ್' ಜಾತಿಸೂಚಕ ಹೆಸರು ಪ್ರತಿಕ್ರಿಯೆಗಳು

ಉಪಾಧ್ಯಾಯ, ಶಾಸ್ತ್ರಿ, ಶರ್ಮ, ಅಯ್ಯ, ಬ್ರಾಹ್ಮಣ ಜಾತಿಸೂಚಕ ಹೆಸರುಗಳಾಗಿದ್ದು ಜನರ ಬಾಯಲ್ಲಿ ಅಯ್ಯ, ರಾಯರು ಪದಗಳು ಅಪಭ್ರಂಶಗೊಂಡು 'ರಾವ್' ಪದ ಬಳಕೆಯಲ್ಲಿದೆ.

– ***ಶ್ರೀ ಎಮ್. ಕೆ. ಸದಾಶಿವಯ್ಯ,*** *ಪೊಳಲಿ*

ಹಿಂದಿನ ರಾಜ ದರ್ಬಾರಿನಲ್ಲಿ ರಾಯಸ ಓದುವವನೇ 'ರಾಯ'ನಾಗಿದ್ದು ಅದೇ ಮುಂದೆ ರಾವ್ ಎಂದು ಜನಪ್ರಿಯವಾಗಿದ್ದು, ಬ್ರಾಹ್ಮಣರಲ್ಲದ ಹಲವಾರು ಜಾತಿಗಳಲ್ಲಿ 'ರಾವ್' ಪದ ಬಳಕೆಯಲ್ಲಿದೆ.

– ***ಶ್ರೀ ಕೆ. ಸದಾಶಿವ ಶಾಸ್ತ್ರಿ,*** *ಕುಳಾಯಿ*

ಬ್ರಿಟಿಷರ ಕಾಲದಲ್ಲಿ ಅಧಿಕ ತೆರಿಗೆ ನೀಡುವವನನ್ನು 'ರಾವ್ ಬಹದ್ದೂರ್' ಎಂದು ಕರೆದು ಗೌರವ ಕೊಡಲಾಗುತ್ತಿತ್ತು. ಅಂದಿನ ಭೂಮಾಲಿಕರಲ್ಲಿ ಬ್ರಾಹ್ಮಣ ವರ್ಗದವರು ಅಧಿಕ ಸಂಖ್ಯೆಯಲ್ಲಿದ್ದುದ್ದರಿಂದ ಅದು ಜಾತಿಸೂಚಕ ಹೆಸರಾಗಿ ಮಾರ್ಪಟ್ಟಿತು.

– ***ಶ್ರೀ ಕರುಣ ರಾವ್ ಬೆಳ್ಳೆ,*** *ಮಂಗಳೂರು*

'ರಾವ್' ಎಂಬುದು ಕೇವಲ ಬ್ರಾಹ್ಮಣರ ಜಾತಿಸೂಚಕ ಪದವಾಗಿ ಉಳಿದಿಲ್ಲ. ಎಲ್ಲಾ ಜಾತಿಯವರು ಅದರ ಲಾಭ ಪಡೆದಿದ್ದು ಆಂಧ್ರದಲ್ಲಿರುವ ಹಿರಿಯ ನಟರು ಈ ಜಾತಿಸೂಚಕ ಪದವನ್ನು ಹೊಂದಿದ್ದು ಅವರಾರೂ ಬ್ರಾಹ್ಮಣರಲ್ಲ.

– ***ಶ್ರೀ ಬಾಲಕೃಷ್ಣ ರಾವ್,*** *ಸುರತ್ಕಲ್*

ನಮ್ಮ ಹೆಸರಿನೊಂದಿಗಿರುವ 'ಅಯ್ಯ' ಎಂಬ ಪದವು ನಾವು ಈ ನೆಲದ ಮೂಲ ಬ್ರಾಹ್ಮಣರೆಂಬುವುದಕ್ಕೆ ಒಂದು ಪುರಾವೆಯಾಗಿದೆ. ಶಿವಬ್ರಾಹ್ಮಣರೆಂದು ಹೆಸರು ಬದಲಾಯಿಸಿಕೊಂಡ ಸಂದರ್ಭದಲ್ಲೇ ಹಾಗೂ ಅದೇ ಕಾರಣಕ್ಕೇ ನಮ್ಮವರು 'ಅಯ್ಯ' ಎಂಬ ವಿಶೇಷಣವನ್ನು ತ್ಯಜಿಸಿ 'ರಾವ್' ಎಂಬ ಉಪಾಧಿಯನ್ನು ಅಂಟಿಸಿಕೊಂಡಿರಬೇಕು. 'ರಾವ್' ಉಪಾಧಿ ಗೌರವಸೂಚಕವಾಗಿಯೂ, ಆಕರ್ಷಕವಾಗಿಯೂ ಇದ್ದುದರಿಂದ ಹೆಚ್ಚು ಜನಪ್ರಿಯವಾಯಿತೆಂದು ನನ್ನ ಊಹೆ.

– ***ಡಾ. ವೈ. ಸುದರ್ಶನ ರಾವ್,*** *ಉಡುಪಿ.*

**ಹೆಬ್ಬಾರ್ ಎಂಟರ್‌ಪ್ರೈಸಸ್**

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**

*ಶುಭ ಸಮಾರಂಭಗಳಿಗೆ ಬೇಕಾಗುವ*
*ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು*
*ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 9448437893

*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

Near Vijaya Pen Mart
Hampankatta, Mangalore - 1



The RIGHT Place for the Customer

**RAJESH POWER PRESS**

PRINTERS & PUBLISHERS

DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ**
**ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

**Sharekhan**
Your guide to the financial jungle

EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT

Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್**
**ಹಾಗೂ**
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು

## ಪ್ರಕಟಣೆಗಳು

2013-14ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ., ಎಮ್.ಎಸ್.ಸಿ., ಎಮ್.ಕಾಂ., ಸಿ.ಎ., ಬಿ.ಎಡ್., ಡಿ.ಎಡ್.) ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿಹಾಳೆಯಲ್ಲಿ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2013-14ನೇ ಸಾಲಿನ ಕಂತನ್ನು ಪಡೆಯಲು **ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು** ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಈ ಸಾಲಿನಲ್ಲಿ ಈ ಕೆಳಗಿನ ಸಾಲ ವಿದ್ಯಾರ್ಥಿವೇತನ ನಿಧಿಗಳನ್ನು ಕೃತಜ್ಞತಾಪೂರ್ವಕವಾಗಿ ಶ್ರೀ ಸಭೆಯು ಸ್ವೀಕರಿಸಿರುತ್ತದೆ.

- **ಡಾ. ದಯಾನಂದ ಎಸ್. ರಾವ್ ಎಜುಕೇಶನಲ್ ಟ್ರಸ್ಟ್, ಬೆಂಗಳೂರು** – ರೂ. 4,00,001-00
- **ಶ್ರೀ ಎಮ್. ಕೆ. ಶಂಕರನಾರಾಯಣ ರಾವ್ ಸಾಲ ವಿದ್ಯಾರ್ಥಿವೇತನ ನಿಧಿ** – ರೂ. 1,00,000-00
- **ಶ್ರೀ ಎಮ್. ವೆಂಕಟರಾವ್ ಶಾನ್‌ಭೋಗ್ ಕುತ್ತೆತ್ತೂರು** ಮತ್ತು **ಶ್ರೀಮತಿ ಪದ್ಮಾವತಿ ರಾವ್ ಸಾಲ ವಿದ್ಯಾರ್ಥಿವೇತನ ನಿಧಿ** – ರೂ. 1,00,000-00

2013-14ನೇ ಸಾಲಿನಲ್ಲಿ ಪಿ.ಯು.ಸಿ. ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿವೇತನವನ್ನು ಪಡೆಯಲು ದಿನಾಂಕ 30-10-2013ರ ಒಳಗೆ ತಲುಪುವಂತೆ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು. ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ :

- ✓ **ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು** ಹಾಗೂ **ಪುತ್ತೂರು ಶಾಖೆ.**
- ✓ **ಶ್ರೀ ಕೆ. ಹರ್ಷಕುಮಾರ್** ಪ್ರಮೋದ್ ಅಟೋಮೊಬೈಲ್ಸ್, ಕರಂಗಲ್ಪಾಡಿ, ಮಂಗಳೂರು
- ✓ **ಶ್ರೀ ಬಿ. ಎಸ್. ಅನಿಲ್ ರಾವ್** ವಿಶ್ರಾಮ್ ಮೋಟಾರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
- ✓ **ಶ್ರೀ ಉಮೇಶ್ ಶಾನ್‌ಭಾಗ್** ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
- ✓ **ಶ್ರೀ ಭೋಜ ರಾವ್** ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ.
- ✓ **ಶ್ರೀ ಶಾರದಾ ಮಂಟಪ,** ಕುಂಜಿಬೆಟ್ಟು, ಉಡುಪಿ.
- ✓ **ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ,** ಪಾವಂಜೆ.
- ✓ **ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ** ಕೊಕ್ರಾಡಿ, ಬೆಳ್ತಂಗಡಿ ತಾಲೂಕು.
- ✓ **ಶ್ರೀ ಎಮ್. ಎಸ್. ಅರುಣ್‌ಕುಮಾರ್** ದಿಶಾ ಬೇಕರಿ, ಉಜಿರೆ.
- ✓ **ಶ್ರೀ ದೇವಾನಂದ ಭಟ್** ಅಧ್ಯಕ್ಷರು, ಆದಿಶಂಕರ ಬ್ರಾಹ್ಮಣ ಸಭಾ, ಮೂಡಬಿದ್ರೆ.
- ✓ **ಶ್ರೀ ಎಮ್. ರಾಮಮೋಹನ್ ರಾವ್** ಅಧ್ಯಕ್ಷರು, ಶಂಕರ ಪ್ರತಿಷ್ಠಾನ, ಕಾರ್ಕಳ.
- ✓ **ಶ್ರೀ ಎಮ್. ಕೆ. ಮೋಹನ್ ರಾವ್** ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ.
- ✓ **ಶ್ರೀ ಎಮ್. ಎಸ್. ರಘುನಾಥ ರಾವ್** ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು.
- ✓ **ಶ್ರೀ ಎನ್. ಎಸ್. ನಟರಾಜ್,** ಪುತ್ತೂರು.
- ✓ **ಡಾ. ಸದಾಶಿವ ರಾವ್,** ಜ್ಯೋತಿ ಆಸ್ಪತ್ರೆ, ಸುಳ್ಯ.
- ✓ **ಶ್ರೀ ಬಿ. ಭಾಸ್ಕರ್ ರಾವ್,** ಬಯಂಬು, ಸುಳ್ಯ.

ಶ್ರೀ ಕೂಡ್ಲು ವಿಷ್ಣುಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/- ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಶ್ರೀ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 60,000/- ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ. ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2013-14ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ಅಕ್ಟೋಬರ್ 2013ರಲ್ಲಿ ನಡೆಯುವ ನಾಡಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30-09-2013ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

–**ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**ಚಿಂತನ**

## ಸ್ವರ್ಗದ ಬಾಗಿಲು

ಅದೊಂದು ದಿನ ಸ್ವರ್ಗದ ಬಾಗಿಲು ಬಳಿ ದೊಡ್ಡದೊಂದು ಗುಂಪು ಸೇರಿತ್ತು. ಕೆಲ ಪೂಜಾರಿಗಳು "ತಕ್ಷಣವೇ ಗೇಟು ತೆಗೆಯಿರಿ!" ಎಂದು ಕೂಗುತ್ತಿದ್ದರು. ಆದರೆ ದ್ವಾರಪಾಲಕರು ಅವರಿಗೆ ಹೇಳಿದರು : "ಸ್ವಲ್ಪ ತಡೆಯಿರಿ. ನಿಮ್ಮ ಬಗ್ಗೆ ನಮಗೆ ಇನ್ನೂ ಹೆಚ್ಚಿನದು ಗೊತ್ತಾಗಬೇಕಿದೆ. ನೀವು ಸಂಪಾದಿಸಿರುವ ನಿಮ್ಮ ಜ್ಞಾನ, ಶಾಸ್ತ್ರಗಳಿಂದ ಬಂದಿದ್ದೋ ಅಥವಾ ನಿಮ್ಮಿಂದಲೇ ಬಂದಿದ್ದೋ ಎಂದು ಗೊತ್ತಾಗಬೇಕಿದೆ. ಏಕೆಂದರೆ, ಇಲ್ಲಿ ಶಾಸ್ತ್ರಗಳಿಂದ ಸಂಪಾದಿಸಿದ ಜ್ಞಾನಕ್ಕೆ ಯಾವುದೇ ಬೆಲೆ ಇಟ್ಟಿಲ್ಲ."

ಆ ಸಮಯದಲ್ಲೆ ಒಬ್ಬ ಸಂನ್ಯಾಸಿ ಗುಂಪಿನ ಮುಂದೆ ಬಂದ ಮತ್ತು ಹೇಳಿದ– "ಗೇಟು ತೆರೆಯಿರಿ! ನಾನು ಸ್ವರ್ಗದೊಳಗೆ ಹೋಗಬೇಕು. ಅನೇಕ ಉಪವಾಸಗಳನ್ನು ಮಾಡಿದ್ದೇನೆ ಮತ್ತು ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇನೆ. ನನ್ನ ಕಾಲದಲ್ಲಿ ನನ್ನ ಹಾಗೆ ದಂಡನೆ ವಿಧಿಸಿಕೊಂಡ ಇನ್ಯಾರಿದ್ದಾರೆ?"

ದ್ವಾರಪಾಲಕ ಉತ್ತರಿಸಿದ– "ಸ್ವಾಮೀಜಿ, ದಯಮಾಡಿ ತುಸುಹೊತ್ತು ಕಾಯಿರಿ. ನಮಗೆ ಗೊತ್ತಾಗಲಿ, ನೀವು ಇಂತಹ ಪ್ರಾಯಶ್ಚಿತ್ತ ಕಾರ್ಯಗಳನ್ನೇಕೆ ಮಾಡಿದಿರೆಂದು. ಏಕೆಂದರೆ ಎಳ್ಳುಮೊನೆಯಷ್ಟು ಸ್ವಾರ್ಥವಿದ್ದರೂ, ಅಲ್ಲಿ ತ್ಯಜಿಸುವಿಕೆ ಇರುವುದಿಲ್ಲ. ಪ್ರಾಯಶ್ಚಿತ್ತವೂ ಇರುವುದಿಲ್ಲ." ಅದೇ ಸಮಯಕ್ಕೆ ಕೆಲವು ಸಮಾಜಸೇವಕರು ಬಂದರು. ಅವರೂ ಸಹ ಸ್ವರ್ಗದೊಳಗೆ ಪ್ರವೇಶ ಬಯಸಿದ್ದರು. ಆದರೆ ದ್ವಾರಪಾಲಕ ಹೇಳಿದ– "ನೀವು ಕೂಡ ದೊಡ್ಡ ಅಪಾರ್ಥ ಮಾಡಿಕೊಂಡಿದ್ದೀರಿ. ಯಾವುದೇ ಸೇವೆ, ಪುರಸ್ಕಾರ ಬಯಸುವಂಥದ್ದಾದರೆ ಅದು ಸೇವೆಯೇ ಅಲ್ಲ. ಆದಾಗ್ಯೂ ನಾವು ನಿಮ್ಮ ಬಗ್ಗೆ ಹೆಚ್ಚಿನದನ್ನು ತಿಳಿದುಕೊಳ್ಳುತ್ತೇವೆ". ಮತ್ತು ಆಗಲೇ ಒಬ್ಬ ದ್ವಾರಪಾಲಕನ ಕಣ್ಣು ಹಿಂಬದಿಯ ನೆರಳಲ್ಲಿ ನಿಂತಿದ್ದ ವ್ಯಕ್ತಿಯನ್ನು ಕಂಡದ್ದು. ಆ ವ್ಯಕ್ತಿಗೆ ಜಾಗ ಬಿಡುವಂತೆ ಗುಂಪಿಗೆ ಹೇಳಲಾಯಿತು. ಆ ಮನುಷ್ಯನ ಕಣ್ಣಿಂದ ನೀರು ಹರಿಯುತ್ತಿತ್ತು. ಅವನು ಹೇಳಿದ– "ಅನುಮಾನವೇ ಇಲ್ಲ, ಇಲ್ಲಿಗೆ ನನ್ನನ್ನು ತಪ್ಪಾಗಿ ಕರೆತರಲಾಗಿದೆ. ನಾನು ಸ್ವರ್ಗದಲ್ಲಿ? ಖಂಡಿತವಾಗಿ ನಾನೊಬ್ಬ ಶುದ್ಧ ಮೂರ್ಖ. ನನಗೆ ಶಾಸ್ತ್ರಗಳು ಗೊತ್ತೇ ಇಲ್ಲ. ನಾನು ಏನನ್ನಾದರೂ ತ್ಯಾಗ ಮಾಡಿರುವೆನೋ ಇಲ್ಲವೋ ನನಗಂತು ಗೊತ್ತಿಲ್ಲ. ಏಕೆಂದರೆ ತ್ಯಜಿಸುವುದಕ್ಕೆ ನನ್ನದು ಎನ್ನುವ ಯಾವುದು ನನ್ನಲ್ಲಿತ್ತು? ನಾನೆಂದೂ ಒಳ್ಳೆಯ ಕೆಲಸಗಳನ್ನು ಮಾಡಿಲ್ಲ. ಹಾಗೆ ಮಾಡುವುದಕ್ಕೆ ನನಗೆ ಸಮಯವಾದರೂ ಎಲ್ಲಿತ್ತು? ಪ್ರೀತಿ ಮಾತ್ರ ಹರಿಯುತ್ತೆ ನನ್ನ ಹೃದಯದಿಂದ, ಆದರೆ ಪ್ರೀತಿಯೊಂದೇ ಸ್ವರ್ಗದೊಳಗೆ ಪ್ರವೇಶಿಸಲು ಅರ್ಹತೆ ತಂದುಕೊಡುವುದಿಲ್ಲವಲ್ಲ. ಮತ್ತು ಸತ್ಯ ಹೇಳುವುದಾದರೆ, ನಾನು ಸ್ವರ್ಗಕ್ಕೆ ಹೋಗಲು ಬಯಸುವುದಿಲ್ಲ. ದಯಮಾಡಿ ಸಜ್ಜನರಾದ ನೀವು, ನನಗೆ ನರಕದ ದಾರಿ ತೋರಿಸಿರಿ. ಬಹುಶಃ ಅದು ನನ್ನ ಜಾಗ ಮತ್ತು ಅಲ್ಲಿಗೆ ನನ್ನ ಅಗತ್ಯವಿದೆ."

ಅವನು ಮಾತು ಮುಗಿಸಿದ ತಕ್ಷಣವೇ ದ್ವಾರಪಾಲಕರು ಸ್ವರ್ಗದ ಬಾಗಿಲನ್ನು ತೆರೆದು ಹೇಳಿದರು– "ಮರ್ತ್ಯರಲ್ಲಿ ಅನುಗ್ರಹಕ್ಕೆ ಪಾತ್ರನಾದವನು ನೀನು. ನಿನಗೆ ಅಮರತ್ವ ದೊರೆತಿದೆ. ಸ್ವರ್ಗದ ಬಾಗಿಲು ಈಗಾಗಲೇ ನಿನಗೆ ತೆರೆದಿದೆ. ನಿನಗೆ ಸುಸ್ವಾಗತ." ಜೀವನವೆಂಬ ಸಾಲಿನ ಕಟ್ಟಕಡೆಯಲ್ಲಿ ನಿಲ್ಲಬೇಕು ಎನ್ನುವುದು ಭಗವಂತನ ಪ್ರಾರ್ಥನೆಗಳಲ್ಲೊಂದಲ್ಲವೇನು? ಬದುಕಿನ ಕಟ್ಟಕಡೆಯಲ್ಲಿ ಇರುವುದು ಒಂದು ಅನುಗ್ರಹ ಮಾತ್ರವಲ್ಲದೆ ಮತ್ತೇನು?

*(ಸಂಗ್ರಹ)*

# ಚಿಣ್ಣರ ಆರ್ಟ್ ಗ್ಯಾಲರಿ




ಚಿತ್ರ 1




ಚಿತ್ರ 2


**ಈ ಮೇಲಿನ ಎರಡು ಚಿತ್ರಗಳಲ್ಲಿರುವ 6 ವ್ಯತ್ಯಾಸಗಳನ್ನು ಗುರುತಿಸಿ.**



**ಶುಭಶ್ರೀ,** *4ನೇ ತರಗತಿ*
*ಲೇಡಿಹಿಲ್ ವಿಕ್ಟೋರಿಯಾ ಹೆಮ್ಮಕ್ಕಳ ಶಾಲೆ, ಮಂಗಳೂರು*



**ತನುಶ್ರೀ,** *ಒಂದನೇ ತರಗತಿ*
*ಶಾರದಾ ವಿದ್ಯಾಲಯ, ಮಂಗಳೂರು*



**ಅನುಜ್ಞಾ ರಾವ್,** *L.K.G.*
*ಶ್ರೀದೇವಿ ನರ್ಸರಿ ಸ್ಕೂಲ್, ಕಿನ್ನಿಗೋಳಿ*

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ. **ನಮ್ಮ ವಿಳಾಸ : ಅಂಚೆ ಪೆಟ್ಟಿಗೆ ನಂ. 206, ದರ್ಬೆ–574 202, ಪುತ್ತೂರು, ದ. ಕ.**

# ಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ವಾರ್ಷಿಕ ಮಹಾಸಭೆಯು ದಿನಾಂಕ 16-06-2013ನೇ ರವಿವಾರ ಎರ್ಮಾಳಿನ ಶ್ರೀ ರಾಜರಾಜೇಶ್ವರಿ ಸಭಾಭವನದಲ್ಲಿ ನಡೆಯಿತು. ಬೆಳಗ್ಗಿನ ಉಪಾಹಾರದ ಬಳಿಕ ಗಂಟೆ 9-00ರಿಂದ ನಮ್ಮ ಸಂಘದ ಪುಟಾಣಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಸುಮಾರು 13 ತಂಡಗಳು ತಮ್ಮ ನೃತ್ಯ ವೈಭವದ ಮೂಲಕ ಸಭಿಕರನ್ನು ರಂಜಿಸಿದುವು.

ಬಳಿಕ 11 ಗಂಟೆಯಿಂದ ಸಂಘದ ಅಧ್ಯಕ್ಷರಾದ ಶ್ರೀ ಎಮ್.ಕೆ. ಮೋಹನ್ ರಾವ್ ಇವರ ಅಧ್ಯಕ್ಷತೆಯಲ್ಲಿ ಸಂಘದ ಮಹಾಸಭೆಯು ನಡೆಯಿತು. ಸಂಘದ ಕಾರ್ಯದರ್ಶಿ ಶ್ರೀಯುತ ಸುಧಾಕರ ಬೆಳ್ಳೆ ಇವರು ಸಂಘವು ಈ ಮೂರು ವರ್ಷಗಳಲ್ಲಿ ಬೆಳೆದು ಬಂದ ಬಗ್ಗೆ ಸವಿಸ್ತಾರವಾದ ವರದಿಯನ್ನು ನೀಡಿದರು. ಅನಂತರ ಕಾರ್ಯಕಾರಿ ಮಂಡಳಿಯನ್ನು ವಿಸರ್ಜಿಸಲಾಯಿತು. ಉಡುಪಿಯ ಶಾರದಾ ಮಂಟಪದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್ ಇವರ ನೇತೃತ್ವದಲ್ಲಿ 26 ನಿರ್ದೇಶಕರನ್ನು ಚುನಾಯಿಸಲಾಯಿತು.

12 ಗಂಟೆಗೆ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಎಂ. ಕೆ. ಮೋಹನ್ ರಾವ್ ವಹಿಸಿದ್ದರು. ಉಡುಪಿ ಶಾರದಾ ಮಂಟಪದ ಅಧ್ಯಕ್ಷರಾದ ಶ್ರೀಯುತ ಪ್ರಫುಲ್ಲಚಂದ್ರ ರಾವ್, ಬಪ್ಪನಾಡು ಸಂಘದ ಕಾರ್ಯದರ್ಶಿ ಡಾ. ರಾಘವ ರಾವ್, ಹೆಜಮಾಡಿಯ ಶ್ರೀಯುತ ವಸಂತ ಕುಮಾರ್, ನಮ್ಮ ಸಂಘದ ಗೌರವಾಧ್ಯಕ್ಷರಾದ ಶ್ರೀಯುತ ಪಿ. ಬಿ. ವಾಸುದೇವ ರಾವ್ ಇವರು ಮುಖ್ಯ ಅತಿಥಿಗಳಾಗಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಮೂಡಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀಯುತ ದೇವಾನಂದ ಭಟ್, ಬೆಳುವಾಯಿ ಇವರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಶ್ರೀಯುತ ಸುಧಾಕರ ಬೆಳ್ಳೆಯವರು ಅತಿಥಿಗಳನ್ನು ಹಾಗೂ ಸಭಿಕರನ್ನು ಸ್ವಾಗತಿಸಿದರು.

ನಿವೃತ್ತ ಉಪನ್ಯಾಸಕರು, ಕೃಷಿಕರು, ಯಕ್ಷಗಾನ ಅರ್ಥಗಾರಿಕೆಯ ನಿಪುಣರು, ಆಧ್ಯಾತ್ಮಿಕ ಚಿಂತಕರು ಅಲ್ಲದೆ ನಮ್ಮ ಸಮಾಜದ ಹಲವು ದೇವಳಗಳಲ್ಲಿ ವೈದಿಕ ಶಿಬಿರಗಳನ್ನು ನಡೆಸಿದ ಶ್ರೀಯುತ ಸಾಂತೂರು ಸದಾಶಿವ ರಾವ್ ಇವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನಿತರು ನಮ್ಮ ಸಂಘ ನಮ್ಮ ವ್ಯಾಪ್ತಿಯಲ್ಲಿರುವ, ನಮ್ಮವರ ಆಡಳಿತಕ್ಕೆ ಒಳಪಟ್ಟ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದನ್ನು ಶ್ಲಾಘಿಸಿದರು. ಮುಂದೆಯೂ ನಮ್ಮ ಬ್ರಾಹ್ಮಣ್ಯವನ್ನು ರಕ್ಷಿಸುವ ಕಾರ್ಯಗಳನ್ನು ನಡೆಸುವಂತೆ ಹಾರೈಸಿದರು. ನಮ್ಮ ಸಂಘದ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗರಿಷ್ಠ ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿನಿ ಕುಂಜೂರಿನ ಕು| ಜ್ಯೋತ್ಸ್ನಾ, ಪಿ.ಯು.ಸಿ.ಯ ಪ್ರತಿಭಾನ್ವಿತರಾದ ಪಡುಬಿದ್ರಿಯ ಅಜಯ್ ಎಸ್. ರಾವ್, ಕು| ಅಕ್ಷತಾ ಎಸ್. ರಾವ್ ಹಾಗೂ ನಂದಳಿಕೆಯ ಕು| ಲಾವಣ್ಯ ಇವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೆ, ನಮ್ಮ ಸಂಘದ ಮೂಲ ಉದ್ದೇಶದಂತೆ ವರ್ಷಂಪ್ರತಿ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹ ಸುಮಾರು 18 ವಿದ್ಯಾರ್ಥಿಗಳಿಗೆ ರೂ. 1,05,000/- ಮೊತ್ತವನ್ನು ದಾನಿಗಳ ನೆರವಿನಿಂದ ನೀಡಲಾಯಿತು. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಮ್ಮ ನೃತ್ಯ ಪ್ರದರ್ಶನವನ್ನು ನೀಡಿದ ಅತಿಥಿ ಕಲಾವಿದೆಯರಾದ ಕಾರ್ಕಳದ ಕು| ಶೃತಿ ಭವಾನಿಶಂಕರ್ ರಾವ್ ಹಾಗೂ ಮೂಡುಬಿದ್ರೆಯ ಕು| ಶುಭಾಂಜನ ದೇವಾನಂದ ಭಟ್ ಇವರನ್ನು ಸಂಘದ ಪರವಾಗಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾದ ಡಾ. ರಾಘವ ರಾವ್ ಇವರು ನಮ್ಮ ಸಂಘವು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು. ಹೆಜಮಾಡಿಯ ಶ್ರೀ ವಸಂತ ಕುಮಾರ್ ಇವರು ಸಂಘದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಯುತ ದೇವಾನಂದ ಭಟ್ ಇವರು ನಮ್ಮ ಸಂಘವು ಮೂರು ವರ್ಷಗಳಲ್ಲಿ ಬೆಳೆದು ಬಂದ ರೀತಿಯನ್ನು ವಿವರಿಸಿದರು. ಇಷ್ಟು ಕಡಿಮೆ ಅವಧಿಯಲ್ಲಿ ನಮ್ಮ ಊರಿನ ನಮ್ಮವರ ಆಡಳಿತಕ್ಕೆ ಒಳಪಟ್ಟ ಎರಡು ದೇವಸ್ಥಾನಗಳ ಸಂಪೂರ್ಣ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶ ಇತ್ಯಾದಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿರುವುದು, ನಮ್ಮ ಸಮಾಜದ ಬಡಕುಟುಂಬದ ವಧುಗಳಿಗೆ ವಿವಾಹಕ್ಕೆ ಸಹಾಯ ಮಾಡುವುದು. ಸಭೆ–ಸಮಾರಂಭಗಳಿಗೆ ಮನೆ ಮನೆಗೆ ಸ್ವತಃ ಭೇಟಿ ನೀಡಿ ಆಮಂತ್ರಣ ನೀಡುವುದು, ಮೊದಲಾದ ಉತ್ತಮ ಕಾರ್ಯವೈಖರಿಯ ಮೂಲಕ ನಮ್ಮ ಸಂಘವು ಆದರ್ಶಣೀಯವಾಗಿ ಇನ್ನೂ ಎತ್ತರಕ್ಕೆ ಬೆಳೆಯುವುದರಲ್ಲಿ ಸಂಶಯವಿಲ್ಲ ಎಂಬುದಾಗಿ ಪ್ರಶಂಶಿಸಿದರು. ಇದರ ಜತೆಗೆ ನಮ್ಮ ಸಂಘವು ಪಡುಬಿದ್ರಿಯ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ನಿರ್ಮಿಸಬೇಕೆಂದಿರುವ ಸುಂದರ ಸಭಾಭವನವು ಆದಷ್ಟು ಶೀಘ್ರದಲ್ಲಿ ನಿರ್ಮಾಣವಾಗುವಲ್ಲಿ ಭಗವಂತನ ಕೃಪೆಯಿರಲಿ ಎಂದು ಹಾರೈಸಿದರು. ಶ್ರೀಯುತ ವೈ. ಎಸ್. ಸುದರ್ಶನ್ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಅಪರಾಹ್ನದ ಭೋಜನಕೂಟದೊಂದಿಗೆ ಸಂಘದ ಮಾಹಾಸಭೆಯು ಸುಸಂಪನ್ನಗೊಂಡಿತು.

ವರದಿ : ***ಶ್ರೀ ದಿವಾಕರ್ ರಾವ್,*** ಪಡುಬಿದ್ರಿ

## ಅಪಾರ ಕೀರ್ತಿ ಗಳಿಸಿ...



ರಜತ್ ಕುಮಾರ್ ಕೆ.ಆರ್.ಕೆ. ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 608 (97.23%) ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಇವನು ಕೆನರಾ ಪ್ರೌಢಶಾಲೆ, ಉರ್ವ ಇಲ್ಲಿನ ವಿದ್ಯಾರ್ಥಿ.

ಇವನಿಗೆ ಎನ್. ಸಿ. ಸಿ. ಕೆಡೆಟ್ ವೆಲ್‌ಫೇರ್ ಸೊಸೈಟಿಯಿಂದ ರೂ. 6000/-ಗಳ ಸ್ಕಾಲರ್‌ಶಿಪ್ ಲಭಿಸಿರುತ್ತದೆ. ಅಲ್ಲದೇ ಶ್ರೀ ಸುರಸರಸ್ವತಿ ಸಭಾ, ದಕ್ಷಿಣಾಮ್ನಾಯಪೀಠಂ, ಶೃಂಗೇರಿ ಇವರು ನಡೆಸುವ ಸಂಸ್ಕೃತ ಪ್ರಥಮ, ದ್ವಿತೀಯ ಮತ್ತು ತೃತೀಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿರುತ್ತಾನೆ. ಕರ್ನಾಟಕ ಸೆಕೆಂಡರಿ ಎಜುಕೇಶನ್ ಬೋರ್ಡ್‌ನವರು ನಡೆಸುವ ಡ್ರಾಯಿಂಗ್ ಪರೀಕ್ಷೆ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಪ್ರಥಮ ದರ್ಜೆಯನ್ನು ಪಡೆದಿರುತ್ತಾನೆ. ಅನೇಕ ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಗಳಿಸಿರುತ್ತಾನೆ.

ಇವನು ಮೃದಂಗ ವಿದ್ವಾನ್ ಶ್ರೀ ಕೆ.ಎಚ್. ರವಿಕುಮಾರ್ ಮತ್ತು ಶ್ರೀಮತಿ ಜ್ಯೋತಿ ರವಿಕುಮಾರ್ ದಂಪತಿಯ ಪುತ್ರ.

## ದಿ. ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ಪ್ರತಿಭಾ ಪುರಸ್ಕಾರ

2012-13ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕ ಗಳಿಸಿ (ವಿಶಿಷ್ಟ ಶ್ರೇಣಿ) ತೇರ್ಗಡೆಯಾದ ಸರ್ವ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಆಸಕ್ತ ಅರ್ಹ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ದಿನಾಂಕ 30-09-13ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ನಾಡಹಬ್ಬದ ದಿನಾಂಕವನ್ನು ಪತ್ರ ಮುಖೇನ ತಿಳಿಸಲಾಗುವುದು.

***ಕೆ. ಸದಾಶಿವ ಶಾಸ್ತ್ರಿ,*** 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ ಕುಳಾಯಿ ಅಂಚೆ, ಮಂಗಳೂರು - 575 019, ದೂ. 0824-2408544

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಕರಂಗಲ್ಪಾಡಿ, ಮಂಗಳೂರು

**(ಸ್ಥಾನಿಕ ಬ್ರಾಹ್ಮಣರ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಜಾಗತಿಕ ಮಟ್ಟದ ಒಕ್ಕೂಟ)**

ತಾ. 07-07-2013ರಂದು ಮಂಗಳೂರಿನಲ್ಲಿ ಜರಗಿದ ಆಡಳಿತ ಮಂಡಳಿಯ ಸಭೆಯಲ್ಲಿ ನಮ್ಮ ಸಮಾಜವನ್ನು ಪ್ರತಿನಿಧಿಸುವ ವೈದಿಕ ವೃತ್ತಿಯಲ್ಲಿರುವ ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರೇ ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಸಮಾಜದ ವೈದಿಕರೆಲ್ಲರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸು ವುದಾಗಿ ನಿಶ್ಚಯಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯನ್ನು ಆಯಾ ಪ್ರದೇಶದ ಸದಸ್ಯ ಸಂಘಗಳಿಗೆ ಹಂಚಿಕೊಡಲಾಗಿದ್ದು ಸಂಘದ ಕಾರ್ಯಕರ್ತರು ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಿದಾಗ ಅವರು ಕೇಳಿದ ಮಾಹಿತಿಯನ್ನಿತ್ತು ಸಹಕರಿಸ ಬೇಕೆಂದು ವೈದಿಕರೆಲ್ಲರನ್ನು ಕೋರುತ್ತಿದ್ದೇವೆ. ಹಾಗೆಯೇ ಒಂದು ವೇಳೆ ಆಗಸ್ಟ್ ಹದಿನೈದರೊಳಗೆ ಯಾರಾದರೂ ವೈದಿಕರನ್ನು ನಮ್ಮ ಕಾರ್ಯಕರ್ತರು ಸಂಪರ್ಕಿಸದೇ ಬಿಟ್ಟುಹೋಗಿದ್ದ ಪಕ್ಷದಲ್ಲಿ ಅವರೇ ಸ್ವತಃ ತಮ್ಮ ಪ್ರದೇಶದ ಸಂಘದ ಅಧ್ಯಕ್ಷರು ಅಥವಾ ಈ ಕಾರ್ಯಕ್ರಮದ ಉಸ್ತುವಾರಿ ಹೊಣೆಹೊತ್ತಿರುವ ಶ್ರೀ ಪ್ರಫುಲ್ಲಚಂದ್ರ ರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ, ಫೋನ್ : 0820-2520754ನಲ್ಲಿ ಸಂಪರ್ಕಿಸಿ ಇವರಿಗೇ ನೇರವಾಗಿ ತಲುಪಿಸಬಹುದು.

***ಶ್ರೀ ಎನ್. ಕೆ. ಜಗನ್ನಿವಾಸ ರಾವ್,*** ಕಾರ್ಯದರ್ಶಿ

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.)
## 76ನೇ ವಾರ್ಷಿಕ ಮಹಾಸಭೆ




ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಇದರ 76ನೇ ವಾರ್ಷಿಕ ಮಹಾಸಭೆಯು ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಭಾಭವನ, ಜೈಲ್ ರಸ್ತೆ, ಬಿಜೈ, ಮಂಗಳೂರು ಇಲ್ಲಿ ತಾ. 28-07-2013ನೇ ಭಾನುವಾರದಂದು ಜರಗಿತು.

ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭಗೊಂಡಿತು. ಸಂಘದ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆಯವರು ಶೇರುದಾರರಿಗೆ ಸ್ವಾಗತವನ್ನು ಕೋರಿದರು. ಸಂಘದ 76 ವರ್ಷಗಳ ಸಾಧನೆಗಳು ಮತ್ತು ಭವಿಷ್ಯದ ಯೋಜನೆಗಳ ಬಗ್ಗೆ ವಿವರಗಳನ್ನು ನೀಡಿ ಸಮಾಜ ಬಾಂಧವರು ಶೇರುದಾರರಾಗಿ ಹಾಗೂ ಠೇವಣಿದಾರರಾಗಿ ಸೇರಿ ಸಂಘವನ್ನು ಬಲಪಡಿಸಬೇಕೆಂದು ವಿನಂತಿಸಿದರು. ಪ್ರಸ್ತುತ 2 ಶಾಖೆಗಳನ್ನು ಹೊಂದಿರುವ ಸಂಘವು ಇನ್ನೂ ಹಲವಾರು ಶಾಖೆಗಳನ್ನು ತೆರೆಯುವ ಯೋಜನೆ ಹೊಂದಿರುವ ಬಗ್ಗೆ ಮಾಹಿತಿ ನೀಡಿದರು.

ಅನಂತರ ಕಾರ್ಯಸೂಚಿಯಂತೆ ಕಾರ್ಯಕ್ರಮವು ಮುಂದುವರಿಯಿತು. ಅಧ್ಯಕ್ಷರು 2012-13ರ ಲಾಭ–ನಷ್ಟ ತಖ್ತೆ, 31-03-2013ರ ಆಸ್ತಿ–ಜವಾಬ್ದಾರಿ ತಖ್ತೆಗಳನ್ನು ಮಂಡಿಸಿ, ಸಭೆಯ ಅನುಮೋದನೆ ಪಡೆದರು. ನಂತರ 2013-2014ರ ಅಂದಾಜು ಆಯ–ವ್ಯಯ ವಿವರಗಳನ್ನು ಮಂಡಿಸಿ, ಶೇರುದಾರರ ಅನುಮೋದನೆ ಪಡೆದರು. 2012-13 ವರ್ಷ ಲಾಭಾಂಶಗಳನ್ನು ವಿಂಗಡಿಸಿ, ಶೇಕಡಾ 12ರ ಡಿವಿಡೆಂಡ್ ಕೊಡುವುದೆಂದು ನಿರ್ಣಯವನ್ನು ಅಂಗೀಕರಿಸಲಾಯಿತು. ಸಹಕಾರ ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶದಿಂದ ಸಂಘದ ಉಪನಿಬಂಧನೆಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಶೇರುದಾರರ ಅನುಮೋದನೆ ಪಡೆಯಲಾಯಿತು.

ಸಂಘದ 2012-13ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ವರದಿ ಇತ್ತು ಸಹಕರಿಸಿದ ಶ್ರೀಮತಿ ಸುಜಯ ದಿನೇಶ ಆಳ್ವ ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಕೊನೆಯಲ್ಲಿ ಸಂಘದ ನಿರ್ದೇಶಕರಾದ ಶ್ರೀ ಬಿ.ಎಸ್. ಅನಿಲ್ ರಾವ್‌ರವರು ವಂದನಾರ್ಪಣೆ ಮಾಡುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ವರದಿ : ***ಟಿ. ಬಿ. ಮೋಹನ್ ರಾವ್,*** ಮಂಗಳೂರು

# ದ. ಕ. ಜಿಲ್ಲೆಗೆ ನೋಟರಿ ಆಗಿ ನೇಮಕ



ಭಾರತ ಸರಕಾರದ ಆದೇಶದಂತೆ ಶ್ರೀ ಯನ್. ಕೆ. ಜಗನ್ನಿವಾಸ ರಾವ್, ನ್ಯಾಯವಾದಿ, ಪುತ್ತೂರು ಇವರು ದ.ಕ. ಜಿಲ್ಲೆಗೆ ನೋಟರಿ ಆಗಿ ನೇಮಕಗೊಂಡಿರುತ್ತಾರೆ. ಸ್ಥಾನಿಕ ಸಮಾಜದಲ್ಲಿ 'ನೋಟರಿ' ಆಗಿ ನೇಮಕಗೊಂಡ ಪ್ರಥಮ ಸಮಾಜ ಬಂಧುಗಳು. ಇವರು ಸುಬ್ರಹ್ಮಣ್ಯ ಸಭಾದ ನಿಕಟಪೂರ್ವ ಅಧ್ಯಕ್ಷರಾಗಿದ್ದು ಪ್ರಸ್ತುತ ಪುತ್ತೂರು ಸ್ಥಾನಿಕ ಸೇವಾ ಸಮಾಜದ ಅಧ್ಯಕ್ಷರು, ಸ್ಥಾನಿಕ ಮಹಾಮಂಡಲದ ಕಾರ್ಯದರ್ಶಿ, ಪುತ್ತೂರು ತಾಲೂಕು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳೂ ಆಗಿರುತ್ತಾರೆ.

# ವಂದನೆ... ಅಭಿನಂದನೆ



ಕುಡ್ವಿ ಭುಜಂಗ ರಾವ್‌ರ ಮೊಮ್ಮಗ ಹಾಗೂ ಡಾ. ಸಂದೀಪ ಶಾಸ್ತ್ರಿ ಮತ್ತು ಡಾ. ಶೈಲಜಾ ಶಾಸ್ತ್ರಿಯವರ ಪುತ್ರ **ಸಂಜಲ್ ಶಾಸ್ತ್ರಿ**ಯು ಬೆಂಗಳೂರಿನ ಸಂತ ಜೋಸೆಫ್ ಕಾಲೇಜಿನಲ್ಲಿ BA (HEP) ಕಲಿಯುತ್ತಿದ್ದು ಕಾಠ್ಮಂಡುವಿನಲ್ಲಿ ನಡೆದ ದಕ್ಷಿಣ ಏಷ್ಯಾ ಪ್ರಾಂತ್ಯ ಸಹಕಾರ ಒಕ್ಕೂಟದ ಆಹ್ವಾನದ ಮೇರೆಗೆ ತೆರಳಿದ್ದು ಅಲ್ಲಿ "Sri Lanka and the SAARC : From the Ethnic Conflict, Post 2000s Politics and what the Future holds"ರ ಬಗ್ಗೆ ಲೇಖನವನ್ನು ಪ್ರಸ್ತುತಪಡಿಸಿದ್ದು ನಿರ್ದೇಶಕರಿಂದ ಪ್ರಶಂಸಾಪತ್ರವನ್ನು ಪಡೆದಿರುತ್ತಾರೆ. ಹಲವಾರು ಕ್ವಿಜ್ ಕಾರ್ಯಕ್ರಮಗಳಲ್ಲಿ ಕಾಲೇಜನ್ನು ಪ್ರತಿನಿಧಿಸಿದ್ದು, ಜೋರ್ಡಾನ್, ಥ್ಯಾಲಾಂಡ್, ಅಮೇರಿಕ, ಸಿಂಗಾಪುರ ಹಾಗೂ ಕೊಸ್ಟರಿಕ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಭಾಗವಹಿಸಿದ ಸಾಧನೆಯನ್ನು ಮಾಡಿದ್ದಾರೆ. ಈತ ಶ್ರೀ ಯಂ. ಕೆ. ಸದಾಶಿವಯ್ಯ ಹಾಗೂ ಶ್ರೀಮತಿ ವೇದಾವತಿಯವರ ಮೊಮ್ಮಗ.



ಭಾರತೀಯ ಮನೋವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆಗೆ 2013-'14ರ ನಿಯೋಜಿತ ಅಧ್ಯಕ್ಷರಾಗಿ ನಮ್ಮ ಸಮಾಜದ ಖ್ಯಾತ ವೈದ್ಯ **ಡಾ। ಹರೀಶ್, ದೇಲಂತಬೆಟ್ಟು** ಆಯ್ಕೆಯಾಗಿರುತ್ತಾರೆ. ಶ್ರೀಯುತರು ಮೈಸೂರಿನಲ್ಲಿ ಎಂ.ಬಿ.,ಬಿ.ಎಸ್., ಬೆಂಗಳೂರಿನಲ್ಲಿ ಎಂ.ಡಿ. ಪದವಿ ಪಡೆದು ರಾಜ್ಯದಾದ್ಯಂತ ಸೇವೆಸಲ್ಲಿಸಿ ಪ್ರಸ್ತುತ ಸುಳ್ಯದ ಕೆ.ವಿ.ಜಿ. ವೈದ್ಯಕೀಯ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸುಕ್ತೀರಿಯ **"ಸಾಂಕೇತ"** ಮನೆಯ ಸುಬ್ರಹ್ಮಣ್ಯ ಶಕುಂತಳಾ ರಾವ್‌ರವರ ಪುತ್ರಿ **ಅಂಜನಾ ರಾವ್,** B.Sc., B.Ed., M.Sc.ಯವರು B.Ed., ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್ ಗಳಿಸಿ ಈಗ ಸರಕಾರಿ ಪ್ರೌಢಶಾಲಾ ಶಿಕ್ಷಕರ ಆಯ್ಕೆಯಲ್ಲಿ 6ನೇ ರ್‍ಯಾಂಕ್ ಪಡೆದು ಆಯ್ಕೆಯಾಗಿ ದಾವಣಗೆರೆಯ ಹೊನ್ನಾಳ ತಾಲೂಕಿನ ನ್ಯಾಮತಿ ಊರಿನಲ್ಲಿ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಎರಡರಲ್ಲಿಯೂ ಶಿಕ್ಷಕಿಯಾಗಿ ನೇಮಕಗೊಂಡಿರುತ್ತಾರೆ.

### ಮೂಡಬಿದಿರೆಯಲ್ಲಿ ಕಲಾವಿದ–ಸಂಘಟಕ
### ಶ್ರೀ ಎಂ. ದೇವಾನಂದ ಭಟ್ ಅವರ 'ಯಕ್ಷವೈಭವ - 2013' ಸಂಪನ್ನ



ಇತ್ತೀಚೆಗೆ ಮೂಡಬಿದಿರೆಯ ಪದ್ಮಾವತಿ ಕಲಾಮಂದಿರದಲ್ಲಿ 5 ದಿನಗಳ ಪರ್ಯಂತ ಜರಗಿದ 'ಯಕ್ಷವೈಭವ 2013' ಬಹಳ ಯಶಸ್ವಿಯಾಗಿ ಜನಮಾನಸದಲ್ಲಿ ನೆಲೆನಿಲ್ಲುವಂತೆ ಮಾಡಿತು. ಯಕ್ಷಗಾನದ ಅಂತರ್ಮುಖಿ ಸತ್ವಗಳನ್ನು ತತ್ವಗಳನ್ನು ಬಹುವಿಧದಿಂದ ಬಹಿರ್ಮುಖಿಗೊಳಿಸುವ ಬಹುಸಾಧ್ಯತೆಗಳ ಕಲಾಕುಂಚವೇ ಯಕ್ಷವೈಭವ 2013. ಕಳೆದ 16 ವರುಷಗಳಿಂದ ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ (ರಿ.), ಬೆಳುವಾಯಿ – ಇವರು ಇಂತಹ ಸಾಧ್ಯತೆಗಳ ಬಗ್ಗೆ ಸಾಧನೆ, ಶೋಧನೆ, ಕಲಾ ಆರಾಧನೆ ಮಾಡಿಕೊಂಡು ಬರುತ್ತಿರುವ ಒಂದು ಒಳ್ಳೆಯ ಸಂಸ್ಥೆ. ಈ ಬಾರಿಯ ವೈಭವದಲ್ಲಿ ಎಡನೀರು ಶ್ರೀಗಳಿಂದ ದೀಪ ಪ್ರಜ್ವಲನಗೊಂಡು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ. ಎಲ್. ಸಾಮಗರ ಅಧ್ಯಕ್ಷ ಸ್ಥಾನದಿಂದ, ಗೌರವಾನ್ವಿತರ ಉಪಸ್ಥಿತಿಯಲ್ಲಿ ಆರಂಭಗೊಂಡ ಕಾರ್ಯಕ್ರಮ ಮೊದಲಿಗೆ ಯಕ್ಷಸಂಗೀತ ದಾಸಸಾಹಿತ್ಯ ನೃತ್ಯವೈಭವ, ಪುಂಡುವೇಷ ವೈಭವ, ಹಾಸ್ಯವೈಭವ, ನವರಸವೈಭವ, ತುಳು ದೇವಿಮಹಾತ್ಮೆ ಹೀಗೆ ಪಂಚಮುಖಿ ಕಾರ್ಯಕ್ರಮದೊಂದಿಗೆ ಮಾನ್ಯ ಸಚಿವ ಶ್ರೀ ಕೆ. ಅಭಯಚಂದ್ರ ಜೈನ್ ಅವರ ಅಧ್ಯಕ್ಷತೆಯಲ್ಲಿ ಕಟೀಲು ಶ್ರೀ ಹರಿನಾರಾಯಣ ದಾಸ್ ಅಸ್ರಣ್ಣ ಇವರ ಆಶೀರ್ವಚನ, ನಮ್ಮ ಸಮಾಜದ ಗಣ್ಯ ಬಿ. ಚಂದ್ರಶೇಖರ್ ರಾವ್, ಡಿ.ಜಿ.ಎಂ., ಕರ್ನಾಟಕ ಬ್ಯಾಂಕ್, ಮಂಗಳೂರು ಇವರ ಗೌರವ ಉಪಸ್ಥಿತಿಯಲ್ಲಿ ಯಕ್ಷಗಾನದ ಹಿರಿಯ ಕಲಾವಿದ ವಿದ್ವಾಂಸರುಗಳಾದ ಶ್ರೀ ಕುಂಬ್ಳೆ ಸುಂದರ ರಾವ್ ಮತ್ತು ಕಡಂದಾಲ ಶ್ರೀ ಪುರುಷೋತ್ತಮ ಭಟ್ ಇವರನ್ನು 'ಯಕ್ಷದೇವ' ಪ್ರಶಸ್ತಿ ಇತ್ತು ಸನ್ಮಾನಿಸುವುದರ ಮುಖಾಂತರ ಈ ಅದ್ದೂರಿ ಕಾರ್ಯಕ್ರಮ ಸಮಾಪನಗೊಂಡಿತು. ✲


Prop. : *Kishore Kumar Kedige*
Ph. : 2231524
M. : 9880726325

KYADIGE
AUTOMOBILES




**Opp. to D. P. Stores**
**Main Road, B. C. Road, Bantwal Tq.**

***Dealers in : 2 & 3 WHEELERS SPARES***

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTER**



***Dealers in : Computers Hardware and Peripherals***
***Computer Sales & Services***

***Alvares Centre, N.H. 17, Nanthoor, Mangalore - 575 005***





## ಜ್ಞಾನ – ನುಡಿ

ಅಜ್ಞಾನಿಯನ್ನು ಕಷ್ಟಪಟ್ಟು ಪ್ರಸನ್ನಚಿತ್ತನನ್ನಾಗಿ ಮಾಡಬಹುದು. ಆದರೆ ಅರ್ಧ ತಿಳಿವಳಿಕೆಯ ಮನುಷ್ಯನನ್ನು ಸಂತೋಷಗೊಳಿಸುವುದು ಬ್ರಹ್ಮನಿಂದಲೂ ಆಗದು.

**ಭರ್ತೃಹರಿ**

## ಜ್ಞಾನ – ಗಾದೆ

ಆಟಗ್ ಪೋನಗೆ ಅಬ್ಬರದ ಸೀರೆ
ಆಟದಾಯನ್ ಮದ್ಮೆ ಆತ್, ರಾತ್ರಿ ಇಡೀ ಕಾತಳ್
ಆರತಿ ಗೆತೊಂಟ ಉಷ್ಣ, ತೀರ್ಥ ಗೆತೊಂಟ ಶೀತ.

## ಜ್ಞಾನ – ನಗೆ

**ರಾಮು :** ಫೇಸ್ ಬುಕ್ ಏಕೆ ಇಷ್ಟೊಂದು ಜನಪ್ರಿಯವಾಗಿದೆ?

**ಗೋಪಿ :** ಏಕೆಂದರೆ, ಜನರು ತಮ್ಮ ಸ್ವಂತ ಜೀವನಕ್ಕಿಂತ ಬೇರೆಯವರ ಜೀವನದ ಬಗ್ಗೆ ಆಸಕ್ತಿ ಹೊಂದಿರುತ್ತಾರೆ!

## ಜ್ಞಾನ – ವಿಸ್ಮಯ

ಜಗತ್ತಿನ 600 ಕೋಟಿ ಜನರಲ್ಲಿ 7.75 ಕೋಟಿ ಜನ ಧರ್ಮ ಬೇಡವೆಂದಿದ್ದರೆ 1.50 ಕೋಟಿ ಜನ ದೇವರು–ಧರ್ಮ ನಂಬದವರಾಗಿದ್ದಾರೆ. ಒಟ್ಟು 43 ಅಧಿಕೃತ ಧರ್ಮವಿರುವ ಜಗತ್ತಿನಲ್ಲಿ ಹಿಂದು ಧರ್ಮೀಯರ ಸಂಖ್ಯೆ 95 ಕೋಟಿ. ಮುಸ್ಲಿಂ ಧರ್ಮೀಯರ ಸಂಖ್ಯೆ 157 ಕೋಟಿ. ಕ್ರೈಸ್ತರ ಸಂಖ್ಯೆ 239 ಕೋಟಿ!

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur*
*Printed at : Rajesh Power Press, Darbe - 574 202, Puttur, D. K.*